ಇಂದು ದಿನಾಂಕಃ 17.08.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ಜಿ ಎಸ್ ಎಂ ವಕೀಲರಿಂದಃ

1. ನನ್ನ ತಂದೆ ನಿಂಗಪ್ಪನಿಗೆ ಇಬ್ಬರು ಮಕ್ಕಳು. ಯಾವುದೇ ಹೆಣ್ಣುಮಕ್ಕಳು ಇರುವುದಿಲ್ಲ. ನನ್ನ ತಂದೆಗೆ ರಂಗಪ್ಪ ಎಂಬುವ ಒಬ್ಬನೇ ತಮ್ಮ. ಸಹೋದರಿಯರು ಇರುವುದಿಲ್ಲ.

2. ನನ್ನ ಘರಾಣೇಯದ ಮೂಲ ಪುರುಷನ ಹೆಸರು ಭರಮಪ್ಪ. ಆತನಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಈ ದಾವೆಯುನ್ನು ಸಲ್ಲಿಸಲು ಮಾಹಿತಿಯನ್ನು ನೀಡಿರುತ್ತಾರೆ. ನನ್ನ ತಂದೆ 2009 ರಲ್ಲಿ ತೀರಿ ಹೋಗಿರುತ್ತಾರೆ. ನನ್ನ ತಂದೆ ಪ್ರತಿವಾದಿಯರ ವಿರುದ್ಧ ಈ ಹಿಂದೆ ಓ ಎಸ್ ನಂ.121/2004 ರಲ್ಲಿ ದಾವೆಯನ್ನು ಹುಡಿದ್ದರು ಎಂದರೆ ಸರಿ. ಆ ದಾವೆಯು ವಜಾಗೊಂಡಿರುತ್ತದೆ. ಆ ದಾವೆಯಲ್ಲಿ ನನ್ನ ತಂದೆಯು ಆಸ್ತಿಯು ನಮ್ಮದೇ ಎಂದು ಕೇಳಿ ಪರಿಹಾರವನ್ನು ಕೋರಿದ್ದರು. ಸದರಿ ದಾವೆಯ ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವೆಯಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ಯಾರ ಮೂಲಕ ತೆಗೆಸಿದ್ದೇವೆ ಮತ್ತು ಸಲ್ಲಿಸಿದ್ದೇವೆ ಎಂದು ನನಗೆ ಮಾಹಿತಿ ಇಲ್ಲ , ನನ್ನ ತಂದೆಗೆ ಗೊತ್ತಿತ್ತು ಎಂದು ನುಡಿಯುತ್ತಾರೆ. ನಾನು ಈ ದಾವೆಯಲ್ಲಿ ಸಲ್ಲಿಸಿರುವ ಉತಾರಗಳಲ್ಲಿ ಯಾರ ಯಾರ ಹೆಸರುಗಳು ಇವೆ ಎಂದು ನನಗೆ ಅಷ್ಟಾಗಿ ಮಾಹಿತಿ ಇರುವುದಿಲ್ಲ.

3. ಓ ಎಸ್ ನಂ.121/2004 ರ ದಾವೆಯು ಯಾವ ಕಾರಣಕ್ಕೆ ವಜಾ ಆಯಿತು ಎಂದರೆ ಸಾಕ್ಷಿಯು ಸದರಿ ದಾವೆಯಲ್ಲಿ ನನ್ನ ಚಿಕ್ಕಪ್ಪನ ಹೆಸರು ನಮೂದು ಇಲ್ಲದಿರುವ ಕಾರಣದಿಂದ ವಜಾಯಾಗಿರುತ್ತದೆ ಎಂದು ನುಡಿಯುತ್ತಾರೆ. ಭರ್ಮ ತಾಯಿ ನಿಂಗವ್ವ ದೊಡ್ಡಮನಿ ಈ ಹೆಸರನ್ನು ನಾನು ಕೇಳಿದ್ದೇನೆ. ಅವರು ನಮ್ಮ ಘರಾಣೇದ ಸದಸ್ಯರು . ಭರ್ಮ ಇವರಿಗೆ ಎಷ್ಟು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರ ಅಜ್ಜನ ಹೆಸರು ನನಗೆ ಗೊತ್ತಿರುವುದಿಲ್ಲ. ಭರ್ಮ ತಾಯಿ ನಿಂಗವ್ವ ಇವರಿಗೆ ನಿಂಗಪ್ಪ, ಚೌಡಪ್ಪ ,ಭರಮಪ್ಪ ಎಂಬ 3 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಂಗಪ್ಪನಿಗೆ 1 ರಿಂದ 4

ನೇ ಪ್ರತಿವಾದಿಯರು ಮಕ್ಕಳು ಎಂಬ ವಿಚಾರ ನನಗೆ ಗೊತ್ತಿಲ್ಲ. ಅವರ ವಂಶಾವಳಿಯ ಬಗ್ಗೆ ನನ್ನ ದಾವೆಯಲ್ಲಿ ನಾನು ಹೇಳಿ ಬರೆಸಿರುವುದಿಲ್ಲ. ಗಾಳೆಪ್ಪನಿಗೆ ನಷ್ಟ ಸಂತತಿ ಎಂದು ನನ್ನ ವಾದ ಪತ್ರದಲ್ಲಿ ಹೇಳಿರುವ ಹಾಗೇ ಯಾವುದಾದರು ದಾಖಲೆಗಳನ್ನು ಹಾಜರು ಮಾಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನಿಂಗಪ್ಪನ ಮಗ ಭರಮಪ್ಪ ಮತ್ತು ಗಿರಿಯಪ್ಪನ ಮಗ ರಂಗಪ್ಪ ಕೂಡಾ ನಷ್ಟ ಸಂತತಿ ಎಂದು ಬರೆಸಿರುವ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ವಕೀಲರು ಈಗ ಸಾಕ್ಷಿಗೆ ಕ ಹಕ್ಕುಗಳ ಪತ್ರಿಕೆಯ ದೃಢಿಕೃತ ನಕಲನ್ನು ತೋರಿಸಿ ಸದರಿ ದಾಖಲೆಯು 5 ಜನರ ಹೆಸರಿನಲ್ಲಿ ಇದೆ ಎಂದು ತೋರಿಸಿದ್ದು ಸಾಕ್ಷಿಯು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ಸರ್ವೆನಂ. 120/8 ರ ನ್ಯಾಯಾಲಯದ ದೃಢಿಕೃತ ಪ್ರತಿಯನ್ನು ಹಾಜರು ಮಾಡಿ ಆ ದಾಖಲೆಯಲ್ಲು ಕೂಡಾ 5 ಜನರ ಹೆಸರಿನಲ್ಲಿ 1966 ನೇ ಇಸ್ವಿಯಿಂದಲೂ 1977 ನೇ ಇಸ್ವಿಯವರೆಗೂ ಪಹಣಿಯಲ್ಲಿ ಹೆಸರು ಮುಂದುವರೆದು ಬಂದಿದ್ದು ಎಂದು ಹೇಳಿಕ್ಕೆ ಒಪ್ಪಿಕೊಂಡಿದ್ದು ಸದರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-1 ಮತ್ತು 2 ರಲ್ಲಿ ಇರುವ 5 ಜನ ವ್ಯಕ್ತಿಗಳನ್ನು ನಾನು ನೋಡಿರುವುದಿಲ್ಲ. ಸದರಿಯವರು ಈಗ ಯಾರು ಬದುಕಿರುವುದಿಲ್ಲ. ಅವರು ಎಷ್ಟು ವರ್ಷಗಳ ಹಿಂದೆ ತೀರಿ ಹೋಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

4. ನನ್ನ ತಂದೆ ನಿಂಗಪ್ಪ ಕೆಂಚಪ್ಪ ದೊಡ್ಡಮನಿ ಇವರು ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾರಸಾ ಪ್ರಕಾರವಾಗಿ ಖಾತೆ ಬದಲಾವಣೆಗೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿ. ಸದರಿ ಅರ್ಜಿಯ ಆದಾರದ ಮೇಲೆ ಖಾತೆಯು ಬದಲಾವಣೆಯಾಗಿರುತ್ತದೆ. ನನ್ನ ತಂದೆ ಖಾತೆ ಬದಲಾವಣೆಗೆ ನೀಡಿದಂತಹ ಅರ್ಜಿ, ವಂಶವಕ್ಷ , ನಮೂನೆ 21 ರ ನೋಟಿಸ್ ಹಾಗೂ ಚಕ್ಕಬಂದಿಯ ನ್ಯಾಯಾಲಯದ ದೃಢಿಕೃತೇ ಪ್ರತಿಗಳನ್ನು ಸಾಕ್ಷಿಗೆ ಪ್ರತಿವಾದಿಯ ಪರ ವಕೀಲರು ಮುಕಾಬಲೆ (Confront) ಮಾಡಿ ತೋರಿಸಿದ್ದು ಸಾಕ್ಷಿಯು ಸದರಿ ದಾಖಲೆಗಳನ್ನು ಒಪ್ಪಿಕೊಂಡಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ-3 ರಿಂದ 6 ಎಂದು ಗುರುತಿಸಲಾಯಿತು. ನಿಡಿ-2 ರಲ್ಲಿ ನಮೂದಿರುವ ವ್ಯಕ್ತಿಗಳು ಹಲವಾರು ನೂರಾರು ವರ್ಷಗಳ ಹಿಂದೆ ತೀರಿ ಹೋಗಿರುವುದರಿಂದ ನಿಡಿ -4 ರ ಫಾರಂ 21 ಕ್ಕೆ ಸಹಿ ಮಾಡಲು ಸಾಧ್ಯವಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

5. ದಾವಾ ಆಸ್ತಿಯು ಮೊದಲಿಗೆ ಗಿರಿಯಪ್ಪ , ಬರಮಣ್ಣ , ಕೆಂಚ , ರಂಗ ಹಾಗೂ ಭರಮ ತಾಯಿ ನಿಂಗವ್ವ ಇವರು ಮಾಲ್ಕೀಯ ಆಸ್ತಿ ಎಂದರೆ ಸರಿಯಲ್ಲ. ಸದರಿ 4 ಜನರ ಒಪ್ಪಿಗೆಯ ಮೇರೆಗೆ 5 ನೇ ಭರಮ ತಾಯಿ ನಿಂಗವ್ವ ಇವರು ದಾವಾ ಆಸ್ತಿಯನ್ನು ವಹಿವಾಟು ಮಾಡಿಕೊಂಡು ಬದಿರುತ್ತಾನೆ ಎಂದರೆ ಸಾಕ್ಷಿಯು ನಾವೇ ಚಿಕ್ಕನಿಂದಲೂ ವಹಿವಾಟು ಮಾಡಿಕೊಂಡು ಬಂದಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಹಾಜರು ಮಾಡಿರುವ ಪಹಣಿ ಪತ್ರಿಕೆಯಲ್ಲಿ ಮೇಲೆ ಹೇಳಿದ 5 ಜನರ ವ್ಯಕ್ತಿಗಳ ಹೆಸರುಗಳು ಮುಂದುವೆದುಕೊಂಡು ಬಂದಿವೆ ಎಂದರೆ ಸರಿಯಲ್ಲ. ನನ್ನ ಅಜ್ಜ ತೀರಿ ಹೋದ ನಂತರ ನನ್ನ ತಂದೆಯು ಇತರ ಮೇಲೆ ಹೇಳಿರುವ ವ್ಯಕ್ತಿಯ ಜೊತೆ ತನ್ನ ಹೆಸರಿಗೆ ಸೇರಿ ಖಾತೆಯನ್ನು ಬದಲಾಯಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯ ನನ್ನ ತಂದೆಯ ಹೆಸರು ಬದಲಾವಣೆಯಾಗಿರುವುದು ಗೊತ್ತು ಇತರ ಹೆಸರು ಬದಲಾವಣೆಯಾಗಿರುವ ಬಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

6. ನಾನು ಹಾಜರು ಮಾಡಿರುವ ನಿಪಿ-1 ರ ಪಹಣಿ ಪತ್ರಿಕೆಯು ಯಾರ ಯಾರ ಹೆಸರಿನಲ್ಲಿ ಇದೆ ಎಂದು ಹೇಳಲು ಬರುವುದಿಲ್ಲ. ನನ್ನ ತಂದೆ ವಾರಸಾ ಖಾತಾ ಬದಲಾವಣೆಗೆ ನೀಡಿದ ಅರ್ಜಿಯಲ್ಲಿ ಆತನನ್ನು ಹೊರತು ಪಡಿಸಿ ಯಾರು ವಾರಸುದಾರರು ಇಲ್ಲ ಎಂದು ಹೇಳಿ ಅರ್ಜಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ರಂಗಪ್ಪ ಕೆಂಚಪ್ಪ ದೊಡ್ಡಮನಿ ಇವರು ನನ್ನ ಚಿಕ್ಕಪ್ಪ ಎಂದು ತೋರಿಸಲು ದಾಖಲೆಗಳನ್ನು ಹಾಜರು ಮಾಡಿದ್ದೀರ ಎಂದರೆ ನನಗೆ ನೆನಪಿರುವುದಿಲ್ಲ. ನನ್ನ ತಂದೆ ನಿಂಗಪ್ಪ ದೊಡ್ಡಮನಿ ಅವರು ನಮ್ಮ ಜೊತೆ ಶಿಕಾರಿಪುರದ ಕಡೆನಂದಿಹಳ್ಳಿ ಗ್ರಾಮದಲ್ಲಿ 30 ರಿಂದ 35 ವರ್ಷಗಳಿಂದ ವಾಸವಾಗಿದ್ದಾರೆ ಎಂದರೆ ಸರಿ. ಅವರು ಸದರಿ ಗ್ರಾಮಕ್ಕೆ ಹೋಗುವ ಮುಂಚೆ ಕಳಗೊಂಡ ಗ್ರಾಮದಲ್ಲಿದ್ದ ತನ್ನ ಆಸ್ತಿಗಳನ್ನು ಮಾರಾಟ ಮಾಡಿ ಅಲ್ಲಿ ಹೋಗಿ ನೆಲಸಿದ್ದರು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಣ್ಣ ಈಗಲೂ ಸಹ ಕಡೆನಂದಿಹಳ್ಳಿ ಗ್ರಾಮದಲ್ಲಿ ವಾಸವಿದ್ದೇನೆ ಎಂದರೆ ಸರಿ.

7. ಭರಮ ತಾಯಿ ನಿಂಗವ್ವ ಅವರು 1 ರಿಂದ 5 ನೇ ಪ್ರತಿವಾದಿಯರ ಅಜ್ಜ ಎಂದರೆ ಅವರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಭರಮ ತಾಯಿ ನಿಂಗವ್ವ ಅವರು ತೀರಿ ಹೋಗುವ ತನಕೆ ದಾವಾ ಆಸ್ತಿಯನ್ನು ತನ್ನ ಖಬ್ಜಾದಲ್ಲಿ ಇಟ್ಟುಕೊಂಡು ವಹಿವಾಟು ಮಾಡಿಕೊಂಡು ಬಂದಿದ್ದು ಅವರು ತೀರಿ ಹೋದ ನಂತರ 1 ರಿಂದ 4 ನೇ ಪ್ರತಿವಾದಿಗಳು

ವಹಿವಾಟು ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

8. ದಾವಾ ಆಸ್ತಿಯು ನಮ್ಮ ಖಬ್ಜಾ ಮತ್ತು ವಹಿವಾಟಿನಲ್ಲಿ ಇವೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರು ಮಾಡಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಸಲ್ಲಿಸಿದ್ದ ಓ ಎಸ್ ನಂ. 121/2014 ರಲ್ಲಿ ಈ ದಾವೆಯ 1 ರಿಂದ 4 ನೇ ಪ್ರತಿವಾದಿಗಳು ತಮ್ಮ ತಕರಾರುಗಳನ್ನು ಸಲ್ಲಿಸಿ ನನ್ನ ತಂದೆಯ ಮಾಲೀಕತ್ವನ್ನು ಅಲ್ಲಗಳೆದಿದ್ದರು ಎಂದರೆ ಸರಿ. ಸದರಿ ದಾವೆಯು ವಜಾ ಆಗಿರುದರಿಂದ ಈ ಪ್ರಸ್ತುತ ದಾವೆಯ ಕಾನೂನಿನ ಪ್ರಕಾರ ಉರ್ಜಿತವಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯು ಮೇಲ್ಮವಿ ಸಲ್ಲಿಸಿದ ನಂತರ ಕೆಳ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದಾಗ ಮಾಡಿ ತಪ್ಪು ಗಳನ್ನು ತಿದ್ದುಪಡಿ ಮಾಡಿಸಲು ಅವಕಾಶ ಇತ್ತು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ಸದರಿ ದಾವೆಯಲ್ಲಿ ದಿಃ 27-10-2004 ರಂದು ನನ್ನ ತಂದೆಯ ಮಾಲೀಕತ್ವನ್ನು ಅಲ್ಲಗಳೆದು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದರಿಂದ ಈ ದಾವೆಯನ್ನು ಸಲ್ಲಿಸಲು ಕಾಲ ವಿಳಂಬವಾಗಿದ್ದರಿಂದ ಈ ದಾವೆಯು ಉರ್ಜಿತವಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ
Sd/-xxxx

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.